CC 2/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 03.09.2025

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಎಚ್ ಪಿ ವಕೀಲರಿಂದಃ**

ನನ್ನ ಹಾಲು ಮತ್ತು ಬ್ರೆಡ್ ಅಂಗಡಿಯಿಂದ ದಿನಕ್ಕೆ 800 ರೂಪಾಯಿ ಆದಾಯ ಬರುತ್ತದೆ. ರೂ. 800/- ಹಣದಲ್ಲಿ ಹಾಲು, ಬ್ರೆಡ್ ಮತ್ತು ಬಾಡಿಗೆಯನ್ನು ತೆಗೆದರೆ ದಿನಕ್ಕೆ ರೂ. 600/- ಲಾಭ ಬರುತ್ತದೆ. ತಿಂಗಳಿಗೆ ಖರ್ಚನ್ನು ಎಲ್ಲಾ ತೆಗೆದು ರೂ.10 ಸಾವಿರ ಉಳಿಯುತ್ತದೆ. ನಮ್ಮದು ಸ್ವಂತ ಮನೆ ಇರುತ್ತದೆ. ಆರೋಪಿಗೆ ನಾನು ರೂ.2,45,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಹಣ ಕೊಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಆರೋಪಿಯು ಹಣ ತೆಗೆದುಕೊಂಡು ಹೋಗಲು ಚನ್ನಗಿರಿಗೆ ಬಂದಿದ್ದರು. ಆರೋಪಿಗೆ ಹಣ ಕೊಡುವ ಪೂರ್ವದಲ್ಲಿ ನನ್ನ ಹೆಂಡತಿಯ ಅಣ್ಣ ಇಮ್ರಾನ್ ಪಾಷಾರವರನ್ನು ವಿಚಾರಿಸಿರುತ್ತೇನೆ. ಆರೋಪಿಯು ಹಣ ಕೇಳಲು ಬಂದಿರುತ್ತಾರೆ ಎಂದು ನಾನು ನನ್ನ ಬಾಮೈದ ಇಮ್ರಾನ್ ಪಾಷಾರವರನ್ನು ಬರುವಂತೆ ಕರೆದಿಲ್ಲ. ನನಗೆ ರೂ.2,45,000/- ಹಣ ಹೇಗೆ ಬಂದಿತು ಎಂದು ನನ್ನ ದೂರಿನಲ್ಲಿ ಹೇಳಿಲ್ಲ. ನಾನು ಸುಮಾರು 8-9 ವರ್ಷಗಳಿಂದ ಹಾಲು ಮತ್ತು ಬ್ರೆಡ್ ಅಂಗಡಿ ನಡೆಸುತ್ತಿದ್ದೇನೆ. ನಾನು ಆದಾಯ ತೆರಿಗೆ ರಿಟನ್ರ್ಸ ಸಲ್ಲಿಸುವುದಿಲ್ಲ. ನನ್ನ ಬಾಮೈದ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದು ಗೊತ್ತು ಆದರೆ ಅವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣ ಕೊಡುವಾಗ ನನ್ನ ಬಾಮೈದ ಇಮ್ರಾನ್ ಪಾಷಾರವರು ತಾನು ಸಹ ಆರೋಪಿಗೆ ಹಣ ಕೊಟ್ಟಿರುತ್ತೇನೆ ನೀನು ಕೊಡುವುದು ಬೇಡ ಎಂದು ನನಗೆ ಹೇಳಿಲ್ಲ. ಹಣಕಾಸಿನ ವ್ಯವಹಾರ ಕೇವಲ ಆರೋಪಿ ಮತ್ತು ನನ್ನ ಬಾಮೈದ ಇಮ್ರಾನ್ ಪಾಷಾರವರ ನಡುವೆ ಆಗಿದ್ದು ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ಆರೋಪಿಗೆ ನೋಟೀಸ್ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಬಳಿ ಚೆಕ್ ಮಾತ್ರ ಇದ್ದು ಅದನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಚೆಕ್ಕನ್ನು ಆರೋಪಿಯು ಆಂಗ್ಲ ಭಾಷೆಯಲ್ಲಿ ಭರ್ತಿ ಮಾಡಿ ಕೊಟ್ಟಿರುತ್ತಾರೆ. ನಾನು ದಿನಾಂಕ 14.04.2024 ರಂದು ಆರೋಪಿಗೆ ಹಣ ಕೊಟ್ಟಿದ್ದೆ. ಆರೋಪಿಯು ದಿನಾಂಕ 15.07.2024 ಎಂದು ದಿನಾಂಕ ಬರೆದು ಚೆಕ್ಕನ್ನು ಕೊಟ್ಟಿರುತ್ತಾರೆ. ಆರೋಪಿಗೆ ನೋಟೀಸನ್ನು ಅಂಚೆ ಇಲಾಖೆಯ ಮೂಲಕ ಕಳುಹಿಸಿರುತ್ತೇನೆ. ಆರೋಪಿಗೆ ನೋಟೀಸ್ ತಲುಪಿರುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಗೆ ಕಳುಹಿಸಿದ ನೋಟೀಸ್ ಅವರಿಗೆ ತಲುಪಿರುತ್ತದೆಯೋ ಇಲ್ಲವೋ ಎಂದು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನಮ್ಮ ವಕೀಲರು ಒಮ್ಮೆ ತಲುಪಿಲ್ಲ ಎಂದು ಹೇಳಿದ್ದರು ಆದರೆ ನಿಖರವಾಗಿ ನನಗೆ ಗೊತ್ತಿಲ್ಲ. ಆರೋಪಿಗೆ ನಮ್ಮ ವಕೀಲರ ಮೂಲಕ ಕಳುಹಿಸಿದ ನೋಟೀಸ್ ಜಾರಿಯಾಗಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿರುವ ದಿನಾಂಕದಂದು ಅದನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಬ್ಯಾಂಕಿನವರು ಖಾತೆಯಲ್ಲಿ ಹಣವಿಲ್ಲ ಮತ್ತು ಸಹಿ ಸರಿ ಇಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ. ಆರೋಪಿಯು ಇಮ್ರಾನ್ ಪಾಷಾರವರ ಜೊತೆ ಹಣಕಾಸಿನ ವ್ಯವಹಾರ ಮಾಡುವಾಗ ಅವರು ಆರೋಪಿಯ 5-6 ಚೆಕ್ಕುಗಳನ್ನು

ಪಡೆದಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿಯನ್ನು ಓಡಾಡಿಸಬೇಕು ಎನ್ನುವ ಉದ್ದೇಶದಿಂದ ಇಮ್ರಾನ್ ಪಾಷಾರವರು ಆರೋಪಿಯ 1 ಚೆಕ್ಕನ್ನು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯು ಕೊಟ್ಟ ಚೆಕ್ ನಂ. 031042 ಇರುತ್ತದೆ. ಇಮ್ರಾನ್ ಪಾಷಾರವರಿಗೆ ಕೊಟ್ಟ ಆರೋಪಿಯ 1 ಚೆಕ್ಕನ್ನು ನಾನು ಇಮ್ರಾನ್ ಪಾಷಾರವರ ಜೊತೆ ಕೂಡಿಕೊಂಡು ದುರುಪಯೋಗ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಇಮ್ರಾನ್ ಪಾಷಾರವರ ಬರವಣಿಗೆಯನ್ನು ನನಗೆ ಗುರುತಿಸಲು ಆಗುವುದಿಲ್ಲ. ಈಗ ತೋರಿಸಿದ ದಾಖಲೆ ಇಮ್ರಾನ್ ಪಾಷಾರವರ ಬರವಣಿಗೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಇಮ್ರಾನ್ ಪಾಷಾರವರಿಂದ ಹಣ ಪಡೆದ ನಂತರ ದಿನಾಂಕ 06.11.2021, 06.12.2021, 06.07.2022, 06.08.2022, 06.09.2022, 06.10.2022, 06.11.2022 ರಂದು ಶೇಕಡ 5 ರ ಬಡ್ಡಿ ದರದಲ್ಲಿ ಹಣವನ್ನು ಪಾವತಿಸುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಇಮ್ರಾನ್ ಪಾಷಾರವರು ಹಣ ಸ್ವೀಕರಿಸಿದ ಬಗ್ಗೆ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಎಲ್ಲಾ ವಿಷಯ ಗೊತ್ತಿದ್ದರು ಸಹ ನಾನು ಇಮ್ರಾನ್ ಪಾಷಾರವರ ಜೊತೆ ಕೂಡಿಕೊಂಡು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಈ ಪ್ರಕರಣದಲ್ಲಿ ಹೇಳಿರುವಂತೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.2,45,000/- ಹಣವನ್ನು ಸಾಲವಾಗಿ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಫೈನಾನ್ಸ್ ವ್ಯವಹಾರ ನಡೆಸುವುದಿಲ್ಲ. ಇಮ್ರಾನ್ ಪಾಷಾರವರು ಶೇ 5 ರಿಂದ 10 ಬಡ್ಡಿಗೆ ಹಣಕಾಸಿನ ವ್ಯವಹಾರ ನಡೆಸುತ್ತಿದ್ದು ಅದಕ್ಕೆ ನಾನು ಸಾಥ್ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಮ್ರಾನ್ ಪಾಷಾರವರ ಜೊತೆ ಕೂಡಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವತ್ತು ನನಗೆ ಹಣದ ಮರುಪಾವತಿಗಾಗಿ ಪ್ರಶ್ನಿತ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಈ ನ್ಯಾಯಾಲಯದಲ್ಲಿ ನೋಡಿರುವ ಮೊದಲು ಯಾವತ್ತು ಅವರನ್ನು ಮುಖಾಮುಖಿ ಭೇಟಿಯಾಗಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನನಗೆ ಹಣ ಕೊಡುವಷ್ಟು ಸಾಮರ್ಥ್ಯ ಇಲ್ಲದ ಕಾರಣ ಈ ಪ್ರಕರಣ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಒಂದುವೇಳೆ ನಾನು ಆರೋಪಿಗೆ ಹಣ ಕೊಟ್ಟಿದ್ದರೆ ಇಮ್ರಾನ್ ಪಾಷಾರವರ ಸಮ್ಮುಖದಲ್ಲಿ ಹಣ ಕೊಡುತ್ತಿದ್ದು ನಾನು ಹಣ ಕೊಡದೇ ಇರುವುದರಿಂದಲೇ ನಾನು ಅವರ ಸಮಕ್ಷಮ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**